*ಬಿ.ಎಂ.ಪರಶಿವಮೂರ್ತಿ, ಬೆಂಗಳೂರು*
*ಸುಂದರವಾದ ಹೆಣ್ಣನ್ನು ಕಣ್ಣೆತ್ತಿ ನೋಡದ ಗಂಡು ಇದ್ದಾನಾ?*



ಎತ್ತರದ ಗಂಡು! ಕಣ್ಣಿಳಿಸಿಯೇ ನೋಡಬೇಕವನು!

*ಸವಿತಾ ಎನ್ ರೊಡಗಿ, ಕೆರೂರು*
*ಪ್ರತಿ ಪ್ರೇಮಿಗೂ ಪ್ರೀತಿ ಪ್ರದಾನ ಮಾಡುವುದು ಪ್ರಮೋದವನ್ನೋ, ಪ್ರತಾಪವನ್ನೋ?*
ಎರಡೂ ಅಲ್ಲ. ವಿವಾಹವನ್ನು ಅಥವಾ ವಿವಾದವನ್ನು!

*ಕೆ.ಎನ್.ನಾರಾಯಣರೆಡ್ಡಿ, ಕೆ.ಜಿ.ಎಫ್*
*ಸಚಿವರು ದೇವರಿಗೆ ಅರ್ಪಿಸಿದ 45 ಕೋಟಿ ರೂಗಳನ್ನು ತಮ್ಮ ಕ್ಷೇತ್ರಾಭಿವೃದ್ಧಿಗೆ ಉಪಯೋಗಿಸಿದಲ್ಲಿ ದೇವರು ಮೆಚ್ಚುತ್ತಿರಲಿಲ್ಲವೆ?*
ಜಗ ಕಾಯುವವನ ತಲೆ ಕಾಯಲು ಕಿರೀಟವಿತ್ತರೆ ಜಗಕ್ಕೇ ಕೊಡುಗೆ ಇತ್ತಂತಾಯಿತು ಎಂದರಂತೆ ಆ ಸಚಿವರು.

*ಉಷಾ ಉ ಪಡುಬಿದ್ರಿ, ಹೆಜಮಾಡಿ*
*ಗಾಂಧೀಜಿ ಪರಿಕರಗಳನ್ನು ಹರಾಜಿನಲ್ಲಿ ಕೊಂಡ ಲಿಕ್ಕರ್ ದೊರೆಗಳು ಮುಂದೆ ಜಾಹಿರಾತಿನಲ್ಲಿ ಬೀರ್‌ಬಾಟಲ್ ಹಿಡಿದ ಗಾಂಧಿತಾತನನ್ನು ಪ್ರದರ್ಶಿಸಬಹುದೆ?*




ಹಾಗೆ ಮಾಡಿದವರಿಗೆ ಲಿಕ್ಕರ್ ಕೊಡುವ ಕಿಕ್‌ಗಿಂತಲೂ ದೊಡ್ಡ ಕಿಕ್ ಸಾರ್ವಜನಿಕವಾಗಿ ದೊರೆತೀತು!

*ರಮೇಶ್, ಹನುಮನಾಳು*
*ವಾಹನಗಳ ಅಪಘಾತಕ್ಕೆ ಅವಸರವೇ ಕಾರಣ; ಹುಡುಗ ಹುಡುಗಿಯರ ಅಪಘಾತಕ್ಕೆ...?*
ಒಲವೇ! ಇವರದು ಅಪಘಾತವಲ್ಲ, ಅಪ ಘಾತ ಅರ್ಥಾತ್ ನೀರಿನ ಹೊಡೆತ ಉರುಫ್ ಜಲಕ್ರೀಡೆ!

*ಮೊಳಕಾಲ್ಮೂರು ಸುರೇಶ್, ಬಳ್ಳಾರಿ*
*ಪ್ರಾಣಿಗಳೇ ತಮ್ಮ ಹೆರಿಗೆ ತಾವೇ ಮಾಡಿಕೊಳ್ಳುವಾಗ ಮನುಷ್ಯರಿಗೆ ಏಕೆ ಇನ್ನೊಬ್ಬರ ನೆರವು ಬೇಕು?*
ಪ್ರಾಣಿಗಳಿಗೆ ಬಿಸಿನೀರು, ಕಷಾಯಗಳ ಅಗತ್ಯವಿಲ್ಲವಲ್ಲ!

*ಜಿ.ಎನ್. ಪ್ರಸನ್ನಕುಮಾರ್, ತುಮಕೂರು*
*ಸತ್ಯದ ದಾರಿ ಹಿಡಿದರೆ ಯಶಸ್ಸು ಕಷ್ಟದಿಂದಲೂ, ತಡವಾಗಿಯೂ ಸಿಗುವುದು. ಹೀಗೇಕೆ?*
ಆ ದಾರಿಯಲ್ಲಿ ಹಂಪ್‌ಗಳು ಹಳ್ಳಗಳು ಜಾಸ್ತಿಯಾದ್ದರಿಂದ!

*ಎಸ್.ಶ್ರೀಧರ್, ಬೆಂಗಳೂರು*
*ಕೆಲಸಗಳನ್ನು ಮಾಡಿಸಿಕೊಂಡು ನಂತರ ನೀನು ಮಾಡಿದ್ದು ಸರಿಯಿಲ್ಲ ಎನ್ನುವವರಿಗೆ ಏನೆನ್ನಬೇಕು?*
ಸರಿಯಿಲ್ಲ ಎಂದರೆ ಜರುಗುವುದಿಲ್ಲ, ಸರಿಯುವುದಿಲ್ಲ ಅರ್ಥಾತ್ ಮಜಬೂತಾದ ಕೆಲಸವೆಂದಾಯಿತು, ಎತ್ತಿ ಕಾಸು ಎನ್ನಬೇಕು!

*ಗಾಯತ್ರಿ, ರಾಜಾಜಿನಗರ*
*ಹಿತ್ತಲ ಗಿಡ ಮದ್ದಲ್ಲ ಅಂತಾರಲ್ಲಾ... ನೀವೇನಂತೀರಾ?*
ಏನೆಂದು ಏನು ಪ್ರಯೋಜನ! ಹಿತ್ತಲು, ಗಿಡ ಎರಡರ ಅರ್ಥವೂ ಈಗಿನವರಿಗೆ ಅರ್ಥವಾಗುವುದು ಕಷ್ಟ!

*ಬಸವರಾಜ ಹೊನಖಾಂಡೆ, ಅಥಣಿ*
*ನಿಮ್ಮೂರ ಕಾಳಸಂತೆಯಲ್ಲಿ ನ್ಯಾಯ, ನೀತಿ, ಧರ್ಮ ಸಿಗುತ್ತಿದ್ದರೆ ನಮ್ಮೂರಿಗೆ ಕಳುಹಿಸುವಿರಾ ಶಿವಾ?*
ಕಳುಹಿಸಬಹುದು, ಆದರೆ ಅದನ್ನು ಪಡೆಯುವ ಯೋಗ್ಯತೆ ಇರುವವರು ನಿಮ್ಮಲ್ಲಿ ಇಲ್ಲವಂತಲ್ಲಾ...!

*ಸೊಂ.ನಾ. ಶ್ರೀಧರಮೂರ್ತಿ, ದಾವಣಗೆರೆ*
*ಒಳ್ಳೆಯ ಹರಟೆ, ಗಾಸಿಪ್‌ನಿಂದ ಮಹಿಳೆಯರು ಸಂತೋಷಿಗಳೂ, ಆರೋಗ್ಯವಂತರೂ ಆಗಿರುವರೆಂದು ಮಿಚಿಗನ್ ವಿ.ವಿ.ಯ ಸಂಶೋಧನೆ ಹೇಳಿದೆಯಲ್ಲಾ...?*
ಆ ಸಂಶೋಧನೆಯನ್ನು ಯಾರೋ ಟೆಲಿಫೋನ್ ಅಥವಾ ಇಂಟರ್‌ನೆಟ್ ಕಂಪನಿಯವರೇ ಸ್ಪಾನ್ಸರ್ ಮಾಡಿದ್ದರೋ ಏನೋ...!

*ಬಾ.ರಂ.ಸುರೇಶ್, ಶಿವಮೊಗ್ಗ*
*ಹೆಂಡತಿಯಿಂದ ಒಳ್ಳೆಯ ಗಂಡ ಎನಿಸಿಕೊಳ್ಳಲು ಗಂಡ ಯಾವ ಮಾರ್ಗ, ಉಪಾಯ ಅನುಸರಿಸಬೇಕು?*
ಯಾರ ಹೆಂಡತಿಯಿಂದ? ಬೇರೆಯವರ ಹೆಂಡತಿಯಿಂದ ಅನಿಸಿಕೊಳ್ಳಬಹುದು, ಸ್ವಂತ ಹೆಂಡತಿಯಿಂದ ಅಸಾಧ್ಯ ಬಿಡಿ.

## ಬಹುಮಾನಿತ ಪ್ರಶ್ನೆ

*ಡಿ.ಎಲ್. ನಾಗರಾಜ್, ಹರಪನಹಳ್ಳಿ*
*ಕನ್ನಡತಿ ತನ್ನ ಗಂಡನನ್ನು ಏನೊಂದ್ರೇ ಎಂದು ಕರೆಯುವುದರ ಅರ್ಥವೇನು?*
ಅದು ಏನೊಂದ್ರೇ ಏನೂ ಉಪಯೋಗವಿಲ್ಲದವನೇ ಎಂಬುದರ ಹ್ರಸ್ವರೂಪವಂತೆ!

*ಎಸ್.ಜಿ.ರಾಜಶೇಖರ ರೆಡ್ಡಿ, ಗೌರಿಬಿದನೂರು*
*ಮದುವೆಗೆ ಮದುಮಗನ ವಸ್ತ್ರಕ್ಕಿಂತ ಮದುಮಗಳ ವಸ್ತ್ರಗಳು ದುಬಾರಿಯೇಕೆ?*
ಮುತ್ತಿಗಿರುವ ಪ್ಯಾಕಿಂಗ್ ಹತ್ತಿಗೆ ದಕ್ಕೀತೇ? ಅಂತೆಯೇ ಇದೂ!

*ಮಾಲತಿರಾಜು, ಬೆಂಗಳೂರು*
*ಶ್ರಾದ್ಧ ಮಾಡುವುದು ಸತ್ತವರ ಆತ್ಮಶಾಂತಿಗೋ, ಕರ್ಮ ಮಾಡುವವರ ಮನಃಶಾಂತಿಗೋ?*
ಸತ್ತವರು ಭೂತವಾಗಿ ಕಾಡಿಯಾರೆಂಬ ಭಯದ ನಿವಾರಣೆಗಾಗಿ!

*ಎಸ್.ಜಿ. ಭಾಸ್ಕರ ರೆಡ್ಡಿ, ದೊಡ್ಡಬಳ್ಳಾಪುರ*
*ಉತ್ತರ ಸಿಗದಂತಹ ಪ್ರಶ್ನೆಗಳು ಮಾತ್ರ ಕಸದ ಬುಟ್ಟಿಗೆ ಸೇರುತ್ತವಾ?*
ಜಗದಲ್ಲಿ ಉತ್ತರಿಸಲಾಗದ ಪ್ರಶ್ನೆಯೇ ಇಲ್ಲ, ಉತ್ತರಿಸಬಾರದವು ಇವೆ ಅಷ್ಟೆ!

*ಎಂ.ಜಿ.ನೇಹರ್ವಾಣಿ, ಬಳ್ಳಾರಿ*
*ಕಾಗೆಗಳ ಜಗಳಕ್ಕೂ, ರಾಜಕೀಯ ಜಗಳಕ್ಕೂ ಏನು ವ್ಯತ್ಯಾಸ?*
ಕಾಗೆಗಳ ಜಗಳದಲ್ಲಿ ಬರೀ ಕಾಗೆಗಳು ಮಾತ್ರ ಇರುತ್ತವೆ, ರಾಜಕೀಯ ಜಗಳದಲ್ಲಿ ಗೂಬೆಗಳೂ ಇರುತ್ತವೆ.

*ಮುರಲೀಧರ ಕುಲಕರ್ಣಿ, ಬೀದರ*
*ಸ್ವಾತಂತ್ರ್ಯದಿವಸ ಮತ್ತು ಗಣರಾಜ್ಯ ದಿನಗಳಂದು ನಮ್ಮ ದೇಶದ ಜನರಲ್ಲಿ ಉಕ್ಕಿ ಹರಿಯುವ ದೇಶಭಕ್ತಿ ಉಳಿದ ದಿನಗಳಲ್ಲೇಕೆ ಇರುವುದಿಲ್ಲ?*



ವರ್ಷವಿಡೀ ಒಂದೇ ರೀತಿ ಇರಲಾಗದು. ಹುಚ್ಚು ಕೆರಳಲು ಹುಣ್ಣಿಮೆಯ ದಿನ, ಭಕ್ತಿ ಕೆರಳಲು ಬಾವುಟದ ದಿನ!

■ ರಾಮ್